ಈ ದಿನ ಪ್ರಜಾಪ್ರಭುತ್ವದ ಕೊಲೆ ಆಗುತ್ತಿದೆ. ಶಾಸಕರಿಗೆ ರಕ್ಷಣೆ ಕೊಡಬೇಕು. ನೀವು ಈಗ ಈ ರೀತಿ ಮಾಡುತ್ತಿರುವುದು ಸರಿಯಲ್ಲ. ಇದು ಅಕ್ರಮ ಸಭೆ, ತಾವು ಅಕ್ರಮಕ್ಕೆ ದಾರಿ ಮಾಡಿಕೊಡಬಾರದು. ಈ ಸಭೆ ಸಂಪ್ರದಾಯ ಬಿಟ್ಟು ನಡೆಯುವಂತೆ ಆಗಬಾರದು. ಆದುದರಿಂದ ನಾನು ತಮ್ಮಲ್ಲಿ ಅತ್ಯಂತ ಕೃತಜ್ಞತೆಯಿಂದ ಮನವಿ ಮಾಡುತ್ತೇನೆ.....

ಅಧ್ಯಕ್ಷರು : ನೀವು ನನ್ನ ಮಾತನ್ನು ಕೇಳದಿದ್ದರೆ ನಾನು ಉಗ್ರವಾದ ಕ್ರಮವನ್ನು ತಮ್ಮ ಮೇಲೆ ಕೈಗೊಳ್ಳಬೇಕಾಗುತ್ತದೆ. ಶ್ರೀ ವಾಟಾಳ್ ನಾಗರಾಜ್‌ರವರು ಕಾರ್ಯಕಲಾಪಕ್ಕೆ ಬಹಳ ಅಡಚಣೆ ಉಂಟು ಮಾಡುತ್ತಿದ್ದಾರೆ. ಆದುದರಿಂದ ಇವತ್ತಿನ ಕಲಾಪಕ್ಕೆ ಅವರನ್ನು ಅಮಾನತ್ತು ಮಾಡಬೇಕೆಂದು ನಾನು ಹೇಳುತ್ತಿದ್ದೇನೆ.

(ಶ್ರೀ ವಾಟಾಳ್ ನಾಗರಾಜ್‌ರವರನ್ನು ಮಾರ್ಷಲ್ರವರು ಮತ್ತು ಅವರ ಸಿಬ್ಬಂದಿಯವರು ಅವರನ್ನು ಬಲವಂತವಾಗಿ ಎತ್ತಿಕೊಂಡು ಹೊರಕ್ಕೆ ಹಾಕಿದರು)

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾಧ ಉತ್ತರಗಳು.

ಗುಲ್ಬರ್ಗ ಜಿಲ್ಲೆಯಲ್ಲಿ ತೊಗರಿ ಬೆಳೆ ಪರಿಹಾರ ಧನ.

722 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲಬರ್ಗಾ ಜಿಲ್ಲೆಯಲ್ಲಿ ರೈತರಿಗೆ ತೊಗರಿ ಪರಿಹಾರ ಧನವನ್ನು ನೀಡುವ ಕುರಿತು ದಿನಾಂಕ 10-2-1994 ರಂದು ಸದನದಲ್ಲಿ ಚರ್ಚೆಗೆ ಬಂದಾಗ 2 ಕೋಟಿ 7 ಲಕ್ಷ 67 ಸಾವಿರ ಉಳಿದಿರುವ ಪರಿಹಾರ ಧನ ಅತಿ ಶೀಘ್ರದಲ್ಲಿ ವಿತರಣೆ ಮಾಡಲಾಗುತ್ತದೆಂದು ಆಶ್ವಾಸನೆ ನೀಡಿರುವುದು ನಿಜವೇ?*

ಆ) *ಅದರಲ್ಲಿ ಇಲ್ಲಿಯವರೆಗೆ ರೈತರಿಗೆ ಎಷ್ಟು ಪರಿಹಾರ ಧನ ವಿತರಣೆ ಮಾಡಲಾಗಿದೆ?*

ಇ) *ಈ ಉಳಿದಿರುವ 2 ಕೋಟಿ 7 ಲಕ್ಷ 67 ಸಾವಿರ ಹಣದಲ್ಲಿ ಕೇವಲ 56 ಲಕ್ಷ ರೂ. ಬಿಡುಗಡೆ ಮಾಡಲಾಗಿದೆಯೆಂದು ತಿಳಿದಿರುವುದು ನಿಜವೇ?*

ಈ) *ಈ ಪ್ರಕಾರ ಪೂರ್ತಿ ಹಣ ಬಿಡುಗಡೆ ಮಾಡದೆ ಸ್ವಲ್ಪ ಮಟ್ಟಿಗೆ ಬಿಡುಗಡೆ ಮಾಡಿರುವುದರಿಂದ, ರೈತರಿಗೆ ವಿತರಣೆ ಮಾಡುವಲ್ಲಿ ತಾರತಮ್ಯವಾಗುವುದಿಲ್ಲವೆ?*

ಉ) *ಹಾಗಿದ್ದಲ್ಲಿ, ಈಗಾಲಾದರೂ ಅತಿ ಶೀಘ್ರದಲ್ಲಿಯೇ ವಿತರಣೆ ಮಾಡುವ ವ್ಯವಸ್ಥೆ ಮಾಡಲಾಗುವುದೇ?*

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಹೌದು.

ಆ) ಉಳಿದಿರುವ ಹಣವಾದ 2.0767 ಕೋಟಿ ರೂ.ಗಳನ್ನು ಈಗಾಗಲೇ ಸರ್ಕಾರಿ ಆದೇಶ ದಿನಾಂಕ 22-3-94ರಲ್ಲಿ ಬಿಡುಗಡೆ ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಗುಲ್ಬರ್ಗ ಜಿಲ್ಲೆಯ ತೊಗರಿ ಬೆಳೆ ನಾಶವಾಗಿರುವ ಪರಿಹಾರಧನ 7,67,33,000 ರೂಪಾಯಿಗಳನ್ನು ವಿಚಾರಣೆ ಮಾಡಿದ ನಂತರ ಉಳಿದಿರುವ ಹಣ 2,07,67,000 ರೂಪಾಯಿಗಳನ್ನು ಬಡ ರೈತರಿಗೆ ವಿತರಣೆ ಮಾಡಲು ಸುಮಾರು ಒಂದು ವರ್ಷ ವಿಳಂಬ ಆಗಿರುತ್ತದೆ ಅಲ್ಲವೇ? ಈಗ 21-3-94 ರಂದು ಉಳಿದಿರುವ ಹಣ ಎರಡು ಕೋಟಿ ಏಳು ಲಕ್ಷ, 67 ಸಾವಿರ ರೂಪಾಯಿ ಬಿಡುಗಡೆ ಆಗಿದ್ದು ಒಂದು ವಾರದ ಒಳಗೆ ವಿತರಣೆ ಮಾಡುವ ವ್ಯವಸ್ಥೆ ಮಾಡಬಹುದೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ: ಹಣ ಬಿಡುಗಡೆ ಆಗಿದೆ.

ಅಧ್ಯಕ್ಷರು: ಟಿ.ಬಿ. ಜಯಚಂದ್ರರವರೇ ನಿಮ್ಮ 692ನೇ ಪ್ರಶ್ನೆಗೆ ಮಂತ್ರಿಗಳು ಕಾಲಾವಕಾಶ ಕೋರಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ: ಕೆರೆ ಕೆಲಸಗಳು ಆಗುವಂತಹ ಲಕ್ಷಣಗಳು ಕಾಣುತ್ತಿಲ್ಲ ನಮ್ಮ ಅವಧಿ ಮುಗಿಯುವುದರೊಳಗಾದರೂ ಉತ್ತರ ಬರುತ್ತದೆಯೆ?

ಅಧ್ಯಕ್ಷರು: ಆಯಿತು.

ಮೂಡಬಿದರೆಯ ನ್ಯಾಯಬಸದಿಯಲ್ಲಿ ತೋಟಗಾರಿಕಾ ಉದ್ಯಾನವನ

560 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದರೆಯ ನ್ಯಾಯ ಬಸದಿಯ ಬಳಿ ತೋಟಗಾರಿಕಾ ಇಲಾಖೆಯಲ್ಲಿ ಎಷ್ಟು ಎಕರೆ ಸ್ಥಳವಿದೆ?

ಆ) ಈ ಬಾರಿ ನೆರಳಿನ ಎಷ್ಟು ಗಿಡಗಳನ್ನು ನೆಡಲಾಗಿದೆ?

ಇ) ಈ ಗಿಡಗಳಿಗೆ ನೀರು ಒದಗಿಸಲು ಏನು ವ್ಯವಸ್ಥೆ ಮಾಡಲಾಗಿದೆ?

ಈ) ಇದರ ಮೇಲ್ವಿಚಾರಣೆ ಮಾಡಲು ಸೇವಕರನ್ನು ನೇಮಕ ಮಾಡಲಾಗಿದೆಯೇ?

ಉ) ಈ ತೋಟದ ಸಂಪೂರ್ಣ ಅಭಿವೃದ್ಧಿ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುವುದು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಮಂತ್ರಿಗಳು):

ಅ) 8.20 ಎಕರೆ

ಆ) 1993ನೇ ಸಾಲಿನಲ್ಲಿ ಜೂನ್ ಮತ್ತು ಜುಲೈ ಮಾಹೆಯಲ್ಲಿ 5,000 ಗಿಡಗಳನ್ನು ನೆಡಲಾಗಿದೆ.

ಇ) ಒಂದು ಕೊಳವೆ ಬಾವಿಯಿಂದ ನೀರನ್ನು ಒದಗಿಸಲಾಗಿದೆ.

ಈ) ಇದರ ಮೇಲ್ವಿಚಾರಣೆಗೆ ಒಬ್ಬ ಕಾವಲುಗಾರನನ್ನು ನೇಮಿಸಲಾಗಿದೆ.

ಉ) 1994-95ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆವತಿಯಿಂದ ಸುಂದರ ರಾಕ್ ಗಾರ್ಡ್ನ ಅಭಿವೃದ್ಧಿಪಡಿಸಲು ಕಾರ್ಯಕ್ರಮ ಯೋಜಿಸಲಾಗಿದೆ. ಈ ಬಗ್ಗೆ ಒಂದು ಯೋಜನೆಯನ್ನು ತಯಾರಿಸಿ ಶೀಘ್ರವೇ ಅನುಷ್ಠಾನಕ್ಕೆ ತರಲಾಗುವುದು.

ಶ್ರೀ ಕೆ. ಸೋಮಪ್ಪ ಸುವರ್ಣ: ಸನ್ಮಾನ್ಯ ಅಧ್ಯಕ್ಷರೇ, ಮೂಡಬಿದರೆಯ ಚಾರಿತ್ರಿಕ ನ್ಯಾಯ ಬಸಿದಿಯ ಸುಂದರ ಸ್ಥಳದಲ್ಲಿ 5 ಸಾವಿರ ಸಸಿಗಳನ್ನು ಈ ಸಾರಿ ತೋಟಗಾರಿಕಾ ಇಲಾಖೆಯವರು ನೆಟ್ಟಿದ್ದಾರೆ. ಅಲ್ಲಿ ಒಂದು ಕೊಳವೆ ಬಾವಿಯನ್ನು